


'ಸಂಸ್ಕಾರ' ಚಿತ್ರದಲ್ಲಿ ಪ್ರಾಣೇಶಾಚಾರ್ಯರಾಗಿ ಕಾರ್ನಾಡರ ಅಭಿನಯ ಸತ್ಯಜಿತ್ ರೇ ಮೆಚ್ಚುಗೆಗೆ ಪಾತ್ರವಾಗಿತ್ತು

ಮೇರೆಗೆ ಅವರ ಕನಸಿನ ಕೂಸಾದ 'ಭಾರತದಲ್ಲಿ ಹೊಸ ನಾಟಕಗಳು' ಸರಣಿಯ ಸಂಪಾದಕೀಯ ಜವಾಬ್ದಾರಿಯನ್ನು ಪ್ರೆಸ್ ನನಗೆ ವಹಿಸಿತು. ಈ ಸರಣಿಯ ಭಾಗವಾಗಿ ಗಣ್ಯ ಸಾಹಿತಿ ಅಥವಾ ರಂಗಭೂಮಿ ಕಲಾವಿದರಿಂದ ನಾಟಕವನ್ನು ಪರಿಣಾಮಕಾರಿಯಾಗಿ ವಾಚಿಸುವುದು ಗಿರೀಶರ ಐಡಿಯಾ ಆಗಿತ್ತು. ಇದರ ಭಾಗವಾಗಿ, 'ತುಘಲಕ್' ನಾಟಕಕ್ಕಾಗಿ ಅವರು ಆಯ್ಕೆ ಮಾಡಿದ್ದು ಯು.ಆರ್. ಅನಂತಮೂರ್ತಿ ಅವರನ್ನು. ಅನಂತಮೂರ್ತಿ ಅವರ 'ಸಂಸ್ಕಾರ' ಕಾದಂಬರಿ, ಪಟ್ಟಾಭಿರಾಮರೆಡ್ಡಿ ಅವರ ನಿರ್ದೇಶನದಲ್ಲಿ ಚಲನಚಿತ್ರವಾಗಿ ಭಾರತೀಯ ಚಿತ್ರರಂಗದ ಗಮನಸೆಳೆದಿತ್ತು ಹಾಗೂ ಆ ಚಿತ್ರದ ಮುಖ್ಯಪಾತ್ರದಲ್ಲಿ ಗಿರೀಶ್ ಅಭಿನಯಿಸಿದ್ದರು. ಆ ಸರಣಿಯ ಮುಂದಿನ ನಾಟಕವಾಗಿ, ಕಾರ್ನಾಡರು ಇಂಗ್ಲಿಷ್‌ಗೆ ಅನುವಾದಿಸಿದ್ದ ಬಾದಲ್ ಸರ್ಕಾರ್ ಅವರ 'ಎಬಾಂಗ್ ಇಂದ್ರಜಿತ್'ಗೆ ಪ್ರಸ್ತಾವನೆ ಬರೆಯುವಂತೆ ಸತ್ಯದೇವ್ ದುಬೆ ಅವರನ್ನು ನಾನು ಕೇಳಿಕೊಂಡೆ. ಸ್ವಾತಂತ್ರ್ಯೋತ್ತರ ಭಾರತದ ರಂಗಭೂಮಿಯಲ್ಲಿ ದುಬೆ ಅವರ 'ಇಂದ್ರಜಿತ್' ನಾಟಕದ ಅನೇಕ ಪ್ರಯೋಗಗಳು ಮೈಲಿಗಲ್ಲುಗಳಾಗಿ ಗುರ್ತಿಸಿಕೊಂಡಿವೆ. ನನ್ನ ನೆನಪಿನಲ್ಲಿರುವ ಅಂಥದೊಂದು ಸ್ಮರಣೀಯ ಪ್ರಯೋಗ, ಕೋಲ್ಕತ್ತದ ರವೀಂದ್ರ ಸದನ್‌ನಲ್ಲಿ ನಡೆದದ್ದು. ಆ ನಾಟಕದಲ್ಲಿ ದುಬೆ ಇಂದ್ರಜಿತ್ ಪಾತ್ರದಲ್ಲಿ ನಟಿಸಿದ್ದರು.

'ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್'ನ ಭಾರತದಲ್ಲಿನ ಹೊಸ ನಾಟಕಗಳ ಸರಣಿಯ ಮುಂದಿನ ಭಾಗವಾಗಿ ನಾನು, ಒಂದರ ಹಿಂದೆ ಒಂದು ಬಂದ ಗಿರೀಶರ 'ಹಯವದನ' ಹಾಗೂ ವಿಜಯ್ ತೆಂಡೂಲ್ಕರ್ ಅವರ 'ಸೈಲೆನ್ಸ್! ದಿ ಕೋರ್ಟ್ ಇಸ್ ಇನ್ ಸೆಷನ್' (ಅನುವಾದ: ಪ್ರಿಯಾ ಅದರ್ಕರ್) ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿದೆ. ಈ ಸರಣಿಯ ಮೊದಲ ನಾಲ್ಕು ನಾಟಕಗಳು – ಇತಿಹಾಸದ ಶೋಧ, ಆಧುನಿಕತೆ, ಜಾನಪದವನ್ನು ವರ್ತಮಾನದಲ್ಲಿ ಕಾಣುವ ತಳಸ್ಪರ್ಶಿ ಪ್ರಯತ್ನ, ಲಿಂಗಭೇದದ ಪ್ರಶ್ನೆಗಳು ಸೇರಿದಂತೆ ತಮ್ಮ ವೈವಿಧ್ಯದ ವಿಸ್ತಾರದಿಂದಾಗಿ ಭಾರತದ ಆಧುನಿಕ ರಂಗಭೂಮಿಯ ಪ್ರತಿನಿಧಿಗಳಂತಿದ್ದವು ಹಾಗೂ ರಂಗಸಾಧ್ಯತೆಗಳನ್ನು ವಿಸ್ತರಿಸುವಂತಿದ್ದವು. 1960–70ರಲ್ಲಿ ಭಾರತೀಯ ರಂಗಭೂಮಿಯಲ್ಲಾದ ಕ್ಷಿಪ್ರ ಬದಲಾವಣೆಗೆ ಕಾರಣವಾದ ಈ ಚಾರಿತ್ರಿಕ ಕೃತಿಗಳು 'ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್' ಮೊಹರಿನೊಂದಿಗೆ ಬಂದಿದ್ದವು.

ನಾನು ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್‌ನಿಂದ ಹೊರಬೀಳುವುದರೊಂದಿಗೆ ಎಂಬತ್ತರ ದಶಕದ ಮೊದಲ ಭಾಗದಲ್ಲಿ ಆ ಸರಣಿಯ ಗರ್ಭಪಾತವಾಯಿತು. ಆದರೆ ಗಿರೀಶರ ಕನಸನ್ನು ಮುಂದಿನ